**ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.**

---

**ಅಸಲು ದಾವಾ ನಂ** ಃ **167/2016** **ದಿನಾಂಕ** ಃ **10-01-2024**
**ಪಿ.ಡಬ್ಲ್ಯೂ** ಃ **1**

---

**ಃಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತುಃ**

*******

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ಎಲ್ ಎನ್ ರವರಿಂದಃ-**

ಪ್ರತಿವಾದಿರವರು **1985-86** ರಲ್ಲಿ ಮನೆ ನಿರ್ಮಾಣ ಮಾಡಿರುತ್ತಾರೆ. ನಿಪಿ-**18** ಮತ್ತು **19** ರ ಪೋಟೋದಲ್ಲಿರುವುದು ಪ್ರತಿವಾದಿಯ ಮನೆ. ಸಾಕ್ಷಿ ಪುನಃ ಮನೆ ಕಟ್ಟಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಮನೆಯನ್ನು ಯಾವಾಗ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-**1** ರ ಹಕ್ಕುಪತ್ರದಲ್ಲಿ ಗ್ರಾಮ ಠಾಣಾ ಬರೆದು ಸರ್ವೆ ನಂಬರ್ ನ್ನು ಹೊಡೆದು ಹಾಕಿದ್ದಾರೆ. ಸಾಕ್ಷಿಯು ಸರ್ವೆ ನಂಬರ್ ಸಹ ಇರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನಾನು ನನ್ನ ಅಣ್ಣ ರವಿಶಂಕರ್ ರವರ ಹಕ್ಕು ಪತ್ರವನ್ನು ನೋಡಿರುತ್ತೇನೆ. ಸಾಕ್ಷಿಗೆ ಒಂದು ಹಕ್ಕು ಪತ್ರದ ನಕಲನ್ನು ತೋರಿಸಿ ಅದು ತನ್ನ ಅಣ್ಣ ರವಿಶಂಕರ್ ರವರ ಹಕ್ಕು ಪತ್ರದ ಎಂದು ಗುರುತಿಸುತ್ತಾರೆ. ಆದ ಕಾರಣ ಅದನ್ನು ನಿಡಿ-**1** ಎಂದು ಗುರುತಿಸಲಾಯಿತು. ನಿಡಿ-**1** ರಲ್ಲಿ ಸರ್ವೆ ನಂಬರ್ ಹೊಡೆದಿರುತ್ತಾರೆ ಆದರೆ ಅಸಲು ಹಕ್ಕುಪತ್ರದಲ್ಲಿ ಸರ್ವೆ ನಂಬರ್ **23** ಎಂದು ಬರೆದಿರುತ್ತದೆ.

**2.** ನಾನು ಇದೇ ಪ್ರತಿವಾದಿಯ ವಿರುದ್ದ ಓ ಎಸ್ ನಂ. **212/2014** ನ್ನು ದಾಖಲಿಸಿದ್ದೆನು. ಆ ದಾವೆಯಲ್ಲಿ ಅಳತೆ **40*50** ಅಡಿ ಎಂದು ತೋರಿಸಿದೆ. ಆ ದಾವೆಯಲ್ಲಿ ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಯಶೋದಮ್ಮ ಆಸ್ತಿ ಎಂದು ತೋರಿಸಿದೆ. ಸಾಕ್ಷಿ ಮುಂದುವರಿದ ಕಾಂಪೌಂಡ್ ಇರುತ್ತದೆ ಎಂದು ನುಡಿಯುತ್ತಾರೆ. ಆ ದಾವೆಯನ್ನು ದಾಖಲಿಸುವ ಸಮಯದಲ್ಲಿ ಪ್ರತಿವಾದಿಯ ಹಂಚಿನ ಮನೆ ಇತ್ತು. ನಮಗೆ ಸೇರಿದ **20** ಅಡಿ ಇರುತ್ತದೆ ಎಂದು ಈ ದಾವೆ ದಾಖಲಿಸಿರುತ್ತೇವೆ. ನಿಪಿ-**18** ಮತ್ತು **19** ರ ಪೋಟೋದಲ್ಲಿರುವ ಪಶ್ಚಿಮದಿಂದ ರಸ್ತೆಯ ಕಡೆ **20** ಅಡಿ ಪ್ರತಿವಾದಿಗೆ ಪಂಚಾಯಿತಿ ಸಮಕ್ಷಮ ಬಿಟ್ಟುಕೊಟ್ಟಿರುತ್ತೇನೆ. ಸದರಿ ಪಂಚಾಯಿತಿಯಲ್ಲಿ ಬರವಣಿಗೆ ಆಗಿದ್ದು ಸದರಿ ದಾಖಲೆಯನ್ನು ಹಾಜರು ಮಾಡಿರುತ್ತೇನೆ.

**3.** ಹಳೆ ಕಲ್ಲುಶೆಟ್ಟಿಹಳ್ಳಿ ಗ್ರಾಮದಿಂದ ಹೊಸ ಕಲ್ಲುಶೆಟ್ಟಿಹಳ್ಳಿ ಗ್ರಾಮಕ್ಕೆ ಸುಮಾರು ಅರ್ಧ ಕಿಮೀ ಇರುತ್ತದೆ. ಸರ್ವೆ ನಂ. **23** ಹೊಸ ಕಲ್ಲುಶೆಟ್ಟಿಹಳ್ಳಿ ಗ್ರಾಮಕ್ಕೆ ಸೇರಿರುತ್ತದೆ. ದಾವ ಆಸ್ತಿ **3** ನೇ ನಿವೇಶನಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ವತಿಯಿಂದ ನಕ್ಷೆ ಆಗಿರುತ್ತದೆ. ನಾನು ನಕ್ಷೆಯನ್ನು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ನೋಡಿರುತ್ತೇನೆ. ಸದರಿ ನಕಾಶೆಯನ್ನು ಹಾಜರು ಮಾಡಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-**1** ರಲ್ಲಿ **23** ಎಂದು ಬೇರೆಯ ಬರವಣಿಗೆ ಮತ್ತು ಇಂಕಿನಲ್ಲಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-**1** ನ್ನು ಸರ್ಕಾರಿ ಅಧಿಕಾರಿಗಳು ಮಂಜೂರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಂಡಲ

ಪ್ರಧಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನಿಪಿ-1 ನ್ನು ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರ ಬೇಡಿಕೆ ವಹಿಯಲ್ಲಿ ಕಲ್ಲುಶೆಟ್ಟಿಹಳ್ಳಿ ಗ್ರಾಮ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ತೋಟಕ್ಕೆ ಹೋಗುವ ದಾರಿ, ಪಶ್ಚಿಮಕ್ಕೆ ಕಾಂಪೌಂಡ್, ಕಾಂಪೌಂಡ್ ನಂತರ ಪ್ರತಿವಾದಿಯ ಆಸ್ತಿ, ಉತ್ತರಕ್ಕೆ ಹನಿಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ರವಿಶಂಕರ್ ನಿವೇಶನ. ಪ್ರತಿವಾದಿಯ ಮನೆಯಿಂದ ಎರಡುವರೆ ಅಡಿ ನಂತರ ಸದರಿ ಪಶ್ಚಿಮದ ಕಾಂಪೌಂಡ್ ಇರುತ್ತದೆ. ನನ್ನ ನಿವೇಶನದಿಂದ 20 ಅಡಿ ಜಾಗವನ್ನು ಉತ್ತರದ ದಿಕ್ಕಿನಲ್ಲಿ ಬಿಟ್ಟಿರುತ್ತೇನೆ. ಮಾತುಕತೆ ಪ್ರಕಾರ 20*20 ಅಡಿ ಜಾಗ ಬಿಟ್ಟಿರುತ್ತೇನೆ. ಎಷ್ಟು ಅಳತೆಯ ಜಾಗಕ್ಕೆ ಸಂಬಂಧಿಸಿದಂತೆ ಪರಿಹಾರ ಕೇಳಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಸೇರಿದ 20*40 ಅಡಿ ಜಾಗ ಬಿಟ್ಟುಕೊಡುವಂತೆ ಪರಿಹಾರ ಕೋರಿರುವುದಾಗಿ ಉತ್ತರಿಸುತ್ತಾರೆ. ಸದರಿ 20*40 ಅಡಿ ಈ ದಾವಾ ಆಸ್ತಿಯಾಗಿರುತ್ತದೆ.

4. ಪ್ರತಿವಾದಿ ಅನಧೀಕೃತವಾಗಿ ಸರ್ವೆ ನಂ. 23 ರಲ್ಲಿ ಮನೆ ಕಟ್ಟಿರುತ್ತಾರೆ ಎಂದು ತಹಶೀಲ್ದಾರ್ ರವರು ಸದರಿ 60*40 ಅಡಿ ಜಾಗವನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಹಕ್ಕುಪತ್ರ ಮಂಜೂರಾತಿ ಆದ ಮೇಲೆ ನಾನು ಉಪವಿಭಾಗಾಧಿಕಾರಿಗಳಲ್ಲಿ ಮನವಿ ಸಲ್ಲಿಸಿರುತ್ತೇನೆ. ಸದರಿ ಅಪೀಲು ವಜಾ ಆಗಿದ್ದು ಅದನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಪ್ರತಿವಾದಿಗೆ ನೀಡಿದ ಹಕ್ಕುಪತ್ರವನ್ನು ನಾನು ನೋಡಿರುತ್ತೇನೆ.

**(ಈ ಹಂತದಲ್ಲಿ ಮುಂದಿನ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ಬೇಲೂರು.**